# ಟ್ರೋಲಾಸುರ ಹ್! ಎಚ್ಚರ...

ಸಾಮಾಜಿಕ ಜಾಲತಾಣಗಳಲ್ಲಿ ಖ್ಯಾತರನ್ನು ಕೆಣಕುವ ಚಟವೀಗ ವ್ಯಾಪಕವಾಗಿದೆ. ಅದರ ನಿರ್ವಹಣೆ ಸೂಕ್ಷ್ಮವೂ ಸವಾಲಿನದ್ದೂ ಆಗಿದೆ. ನಟ-ನಟಿಯರು, ಕ್ರಿಕೆಟಿಗರು, ರಾಜಕಾರಣಿಗಳು, ಜನಸಾಮಾನ್ಯರು – ಟ್ರೋಲಿಗರು ಯಾರನ್ನೂ ಬಿಟ್ಟಿದ್ದಿಲ್ಲ. ಟ್ರೋಲ್‌ಗಳಿಂದ ನೊಂದವರಿದ್ದಾರೆ, ಖಿನ್ನತೆಗೆ ಜಾರಿದವರಿದ್ದಾರೆ. ತಿರುಗಿಬಿದ್ದು ಟ್ರೋಲಿಗರಿಗೆ ತಕ್ಕ ಉತ್ತರ ನೀಡಿದವರೂ ಇದ್ದಾರೆ. ಆದರೆ, ಟ್ರೋಲ್‌ಗಳ ಕೂರಂಬುಗಳನ್ನು ಎದುರಿಸುವುದು ಎಲ್ಲರಿಗೂ ಸುಲಭವಲ್ಲ. ಅಪಾರ ಸ್ಥೈರಣೆ ಹಾಗೂ ವಿವೇಕ ಬಯಸುವ ಕ್ರಿಯೆಯದು. ಈ ಟ್ರೋಲ್‌ಗಳು ಜಗತ್ತಿನಲ್ಲಿ ಉಂಟು ಮಾಡಿರುವ ಅಲ್ಲೋಲಕಲ್ಲೋಲಗಳನ್ನು ಗಮನಿಸಿದರೆ, ಆದೊಂದು ರೋಚಕ ಹಾಗೂ ಭಯಾನಕ ಲೋಕ.





■ ವಿಶಾಖ ಎನ್.